# ಸಂಸ್ಥೆ ಕಟ್ಟುವುದಕ್ಕಿಂತ ಬೆಳೆಸುವುದು ದೊಡ್ಡ ಸಾಧನೆ

ಶಿರಸಿ: ಕೆಡಿಸಿಸಿ ಸಂಸ್ಥೆ ಬೆಳೆದು ಬಂದ ದಾರಿ ಅಪೂರ್ವವಾದುದು. ಎಲ್ಲ ಹಂತದ ರೈತರು, ಶ್ರೀಸಾಮಾನ್ಯರು, ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುತ್ತ ಬೆಳೆದು ಬಂದಿರುವುದು ವಿಶೇಷ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಕೆಡಿಸಿಸಿ ಬ್ಯಾಂಕಿನ ಶತಮಾನೋತ್ಸವ ಸ್ಮರಣ ಸಂಚಿಕೆಯನ್ನು ಸಾಂಕೇತಿಕವಾಗಿ ಬಿಡುಗಡೆ ಮಾಡಿ ಮಾತನಾಡಿ, ಸಂಸ್ಥೆಯನ್ನು ಹುಟ್ಟು ಹಾಕುವುದು ದೊಡ್ಡ ಕೆಲಸವಲ್ಲ. ಅದನ್ನು ಮುಂದುವರಿಸಿ, ಶತಮಾನದ ತನಕ ನಡೆಸಿಕೊಂಡು ಹೋಗುವುದು ದೊಡ್ಡ ಸಾಧನೆ ಎಂದರು.

ಜೀವನದಲ್ಲಿ 2 ತರಹದ ವ್ಯಕ್ತಿಗಳಿರುತ್ತಾರೆ. ಒಬ್ಬರು ಸತ್ತರೂ ಬದುಕಿದಂತಿರುತ್ತಾರೆ. ಮತ್ತೊಬ್ಬರು ಬದುಕಿಯೂ ಸತ್ತಂತಿರುತ್ತಾರೆ. ಅದರಲ್ಲಿ ಸತ್ತು ಬದುಕಿದಂತಹವರು ಈ ಸಂಸ್ಥೆ ಆರಂಭಿಸಿದವರು. ಸಂಸ್ಥೆ ಉತ್ತಮವಾಗಿ ನಡೆಯಬೇಕಾದರೆ ಆಡಳಿತ ಮಂಡಳಿಯ ಸಹಕಾರ ಮುಖ್ಯ ಎಂದು ಹೇಳಿದರು.

ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಹಾಗೂ ಬೆಂಗಳೂರು ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರಕುಮಾರ ಮಾತನಾಡಿ, ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ ಎಂದರೆ ಸಹಕಾರಿ ಕ್ಷೇತ್ರಕ್ಕೆ ತವರೂರು. ಸಹಕಾರಿ ಕ್ಷೇತ್ರದಲ್ಲಿ 40 ವರ್ಷದ ಅನುಭವದಲ್ಲಿ ರೈತರ ಶಕ್ತಿ ಸಹಕಾರಿ ಬ್ಯಾಂಕ್. ವಾಣಿಜ್ಯ ಬ್ಯಾಂಕಿನ ಎನ್‌ಪಿಎ ಯಾರೂ ಹೇಳುವುದಿಲ್ಲ. ವಾಣಿಜ್ಯ ಬ್ಯಾಂಕಿನಲ್ಲಿ ಸಾಮಾನ್ಯ ಕೃಷಿಕ, ಸಣ್ಣ ವ್ಯಾಪಾರಿಗೆ ಅವಕಾಶವಿಲ್ಲ.

ಈಗ ಭಾಷೆ ಬಾರದ ನೌಕರರೇ ವಾಣಿಜ್ಯ ಬ್ಯಾಂಕ್‌ಗಳಲ್ಲಿ ತುಂಬಿದ್ದಾರೆ. ನಿಜವಾಗಿ ರೈತರ ಸಂಕಷ್ಟಕ್ಕೆ ಸ್ಪಂದಿಸುವುದು ಸಹಕಾರಿ ಬ್ಯಾಂಕ್ ಎಂದರು.



ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು.

## ಶಿರಸಿ ಕೆಡಿಸಿಸಿ ಶತಮಾನೋತ್ಸವ ಸಂಭ್ರಮಾಚರಣೆಗೆ ಸಹಕಾರ ಸಚಿವರಿಂದ ಚಾಲನೆ

# ರಾಜ್ಯದಲ್ಲಿಯೇ ನಂ.1 ಹೆಗ್ಗಳಿಕೆ ಕೆನರಾ ಡಿಸಿಸಿ ಬ್ಯಾಂಕ್‌ಗೆ

ಶಿರಸಿ: ಕಳೆದ ವರ್ಷ ಸರ್ಕಾರ ನೀಡಿದ ಗುರಿಗಿಂತ ಡಿಸಿಸಿ ಬ್ಯಾಂಕುಗಳು ಹೆಚ್ಚು ಕೃಷಿ ಸಾಲ ನೀಡಿವೆ. 21 ಡಿಸಿಸಿ ಬ್ಯಾಂಕುಗಳಲ್ಲಿ 4 ಬ್ಯಾಂಕುಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದ್ದು, ಉಳಿದವು ಉತ್ತಮವಾಗಿವೆ. ಆಡಳಿತ ಮಂಡಳಿಯ ವಿಶ್ವಾಸದಿಂದ ರಾಜ್ಯದಲ್ಲಿನ 21 ಡಿಸಿಸಿ ಬ್ಯಾಂಕ್‌ಗಳಲ್ಲಿ ಕೆನರಾ ಡಿಸಿಸಿ ಬ್ಯಾಂಕ್ ನಂ.1 ಎನಿಸಿಕೊಂಡಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ ಹೇಳಿದರು.

ಅವರು ಸೋಮವಾರ ಇಲ್ಲಿನ ಕೆಡಿಸಿಸಿ ಬ್ಯಾಂಕಿನ ಪ್ರಧಾನ ಕಚೇರಿಯ ಸುಂದರರಾವ್ ಪಂಡಿತ ಸ್ಮಾರಕ ಸಭಾಭವನದಲ್ಲಿ ಶತಮಾನೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಒಂದೆರಡು ಸಹಕಾರ ಬ್ಯಾಂಕ್ ಅವ್ಯವಹಾರದಿಂದ ಇಡೀ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತಿರುವುದನ್ನು ಗಮನಿಸಿ ಆ ಬಗ್ಗೆ ಕಾನೂನು ರೀತಿ ಕ್ರಮ ಕೈಗೊಂಡು ಸರಿಪಡಿಸಲಾಗುತ್ತಿದೆ. ರೈತರಿಗಾಗಿ ಇರುವುದು ಅಪೆಕ್ಸ್ ಮತ್ತು ಡಿಸಿಸಿ ಬ್ಯಾಂಕುಗಳು ಮಾತ್ರ. ಇವುಗಳು ಸರಿಯಾಗಿರಬೇಕೆಂದರೆ ಸರ್ಕಾರದ ಸಹಕಾರ ಇಲಾಖೆಯ ಅವಲೋಕನ ಸರಿಯಾಗಿ ಇರಬೇಕಾಗುತ್ತದೆ. 7794 ಕೋಟಿ ಬೆಳೆ ಸಾಲವನ್ನು ರೈತರಿಗೆ ನೀಡಿದ್ದೇವೆ. ಸ್ವಸಹಾಯ, ಸ್ತ್ರೀ ಶಕ್ತಿ ಸಂಘ, ಅಲ್ಪಾವಧಿ, ದೀರ್ಘಾವಧಿ ಬೆಳೆಸಾಲ, ಎಸ್‌ಸಿ, ಎಸ್‌ಟಿ ಸಾಲ ನೀಡುವುದು ಸಮವಾಗಿ ಆಗುತ್ತಿದೆ ಎಂದು ಸಚಿವರು ಹೇಳಿದರು.



ಶಿರಸಿಯ ಕೆಡಿಸಿಸಿ ಬ್ಯಾಂಕಿನ ಪ್ರಧಾನ ಕಚೇರಿಯ ಸುಂದರರಾವ್ ಪಂಡಿತ ಸ್ಮಾರಕ ಸಭಾಭವನದಲ್ಲಿ ನಡೆದ ಶತಮಾನೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ ಉದ್ಘಾಟಿಸಿದರು. ಸಚಿವರು, ಶಾಸಕರು ಚಿತ್ರದಲ್ಲಿದ್ದಾರೆ.

ನೂರು ವರ್ಷದ ಇತಿಹಾಸದಲ್ಲಿ ನಿರ್ದೇಶಕರು, ಅಧ್ಯಕ್ಷರು, ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿಯನ್ನು ನೆನಪಿಸಿಕೊಳ್ಳಬೇಕಿದೆ ಎಂದರು.

ಕಾರ್ಮಿಕ, ಸಹಕಾರಿ ಇಲಾಖೆ ಖಾತೆ ಕೇಳುತ್ತಾರೆ. ಯಾರಿಗೂ ರೈತರ ಖಾತೆ ಬೇಡ. ಆದರೆ ಪೊಲೀಸ್ ಆಗಿದ್ದವರು ಕೃಷಿ ಇಲಾಖೆ ಕೇಳಿದರು. ಇನ್ನೊಬ್ಬರು ಕಾರ್ಮಿಕ ಖಾತೆ ಮುನ್ನಡೆಸುತ್ತಿದ್ದಾರೆ ಎಂದ ಸಚಿವ ಸೋಮಶೇಖರ, ಹೆಬ್ಬಾರ್ ಅವರ ಸಹವಾಸದಿಂದ ನಾವೆಲ್ಲ ಮಂತ್ರಿ ಆಗಿದ್ದೇವೆ. ಲಾಕ್‌ಡೌನ್ ಸಮಯದಲ್ಲಿ 124 ಕ್ಷೇತ್ರದ ಕಾರ್ಮಿಕರಿಗೆ ಫುಡ್ ಕಿಟ್ ನೀಡಿದ್ದಾರೆ, ಕೊರೊನಾ ವ್ಯಾಕ್ಸಿನ್ ನೀಡಲು ಮುಂದಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವರ ಕಾರ್ಯವನ್ನು ಶ್ಲಾಘಿಸಿದರು.

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕೇಳಿದ ತರಬೇತಿ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನಿಡಿದರು.

### 10 ಪಾಲಿಕೆಗಳಿಗೆ ಸೌಲಭ್ಯ

ಭಾರತ ಬಿಲ್ ಪೇಮೆಂಟ್ ಸಿಸ್ಟಂ ಸೌಲಭ್ಯ ಉದ್ಘಾಟಿಸಿ ಮಾತನಾಡಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ರಾಜ್ಯದಾದ್ಯಂತ ಕುಡಿಯುವ ನೀರು, ಒಳಚರಂಡಿ ಸೌಲಭ್ಯ ನೀಡುವ ಹೊಣೆ ನನ್ನದಾಗಿದೆ. 10 ಮಹಾನಗರ ಪಾಲಿಕೆಗಳಿಗೆ ಸೌಲಭ್ಯ ಒದಗಿಸುವ ಕೆಲಸ ನನ್ನದು ಎಂದು ಹೇಳಿದರು.

ಕೃಷಿ ಸಾಲವನ್ನು ಸಾಂಕೇತಿಕವಾಗಿ ವಿತರಿಸಿ ಮಾತನಾಡಿದ ಶಾಸಕರು ಹಾಗೂ ಬೆಂಗಳೂರು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ ಅವರು, ರಿಸರ್ವ್ ಬ್ಯಾಂಕ್ 2020-21ನೇ ಸಾಲಿನ ಬ್ಯಾಂಕ್ ಸ್ಥಿತಿಗತಿ ವಿವರಿಸಿದ್ದು, ನೂರಾರು ಬ್ಯಾಂಕ್ ನಷ್ಟದಲ್ಲಿವೆ. ಆದರೆ ಸಹಕಾರ ಬ್ಯಾಂಕ್ ಮಾತ್ರ ಯಾವುದೇ ನಷ್ಟವಿಲ್ಲದೇ ಮುನ್ನಡೆಯುತ್ತಿದೆ ಎಂದರು.

ಕಾರ್ಮಿಕ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕೆಡಿಸಿಸಿ ಬ್ಯಾಂಕ್ ಲಿ., ಶಿರಸಿ ಅಧ್ಯಕ್ಷ ಶಿವರಾಮ ಹೆಬ್ಬಾರ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕೃಷಿ ಸಚಿವ ಬಿ.ಸಿ.ಪಾಟೀಲ್, ಶಾಸಕರಾದ ಆರ್.ವಿ.ದೇಶಪಾಂಡೆ (ಹಳಿಯಾಳ), ದಿನಕರ ಶೆಟ್ಟಿ (ಕುಮಟಾ), ಸುನೀಲ ನಾಯ್ಕ (ಭಟ್ಕಳ), ವಿಧಾನಪರಿಷತ್ ಸದಸ್ಯರಾದ ಎಸ್.ಎಲ್.ಘೋಟ್ನೇಕರ್, ಎಸ್.ವಿ.ಸಂಕನೂರ, ಶಾಂತಾರಾಮ ಸಿದ್ದಿ, ವಾ.ಕ.ರಾ.ರ.ಸಾ.ನಿಗಮ ಅಧ್ಯಕ್ಷ ವಿ.ಎಸ್.ಪಾಟೀಲ್, ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ., ಮಂಗಳೂರು ಹಾಗೂ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ನಿ., ಬೆಂಗಳೂರು ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರಕುಮಾರ, ಸಹಕಾರ ಸಂಘಗಳು ಬೆಳಗಾವಿ ಸಂಯುಕ್ತ ನಿಬಂಧಕ ಜಿ.ಎಂ.ಪಾಟೀಲ, ಪ್ರಮೋದ ಹೆಗಡೆ ಉಪಸ್ಥಿತರಿದ್ದರು.